ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/70/2015-16. ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಗೌರಮ್ಮ ಗಂಡ ಲೇಟ್ ಸಿದ್ದಪ್ಪ<br>2)ಕಕ್ಕುಪ್ಪಿ ಭರ್ಮಪ್ಪ ತಂದೆ ಲೇಟ್ ಸಿದ್ದಪ್ಪ<br>ವಿರುಪಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು | ತಿಮ್ಮವ್ವ ಗಂಡ ಲೇಟ್ ಸಣ್ಣಯ್ಯ<br>ವಿರುಪಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕಕ್ಕುಪ್ಪಿ ಗ್ರಾಮದ ಸನಂ 57ಜಿ/1. ವಿಸ್ತೀರ್ಣ 1-82 ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಕ್ಕುಪ್ಪಿ ಗ್ರಾಮದ ಸನಂ 57ಜಿ/1. ವಿಸ್ತೀರ್ಣ 1-82 ಎಕ್ರೆ ಜಮೀನನ್ನು ಸದರಿ ತಾಲೂಕು ವಿರುಪಾಪುರ ಗ್ರಾಮದ ಗೌರಮ್ಮ ಗಂಡ ಲೇಟ್ ಸಿದ್ದಪ್ಪ ಇವರು ದಿನಾಂಕ 08-09-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಕ್ಕುಪ್ಪಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 17-10-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ವಿರುಪಾಪುರ ಗ್ರಾಮದ ತಿಮ್ಮವ್ವ ಗಂಡ ಲೇಟ್ ಸಣ್ಣಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 06/2015-16. ದಿನಾಂಕ 18-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-04-2016. ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ಕಕ್ಕುಪ್ಪಿ ಗ್ರಾಮದ ಸನಂ 57ಜಿ/1. ವಿಸ್ತೀರ್ಣ 1-82 ಎಕ್ರೆ ಜಮೀನು ನನ್ನ ಹಿರಿಯ ಮಗನಾದ ಕಕ್ಕುಪ್ಪಿ ಭರಮಪ್ಪ ತಂದೆ ಸಿದ್ದಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ನನ್ನ ಮೇಲಿನ ಪ್ರೀತಿ ವಿಶ್ವಾಸದಿಂದ ದಿನಾಂಕ 08-09-2015 ರಂದು ಪಾಲು ವಿಭಾಗ ಪತ್ರ ಬರೆಯಿಸಿರುತ್ತಾರೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಸದರಿ ಜಮೀನು ನನ್ನ ಹಿಸ್ಸ್ಯಾಕ್ಕೆ ಬಂದಿರುತ್ತದೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನಿಗೆ ಅರ್ಜಿದಾರರು ಮತ್ತು ಪ್ರತಿವಾದಿಯು ವಾರಸುದಾರರಾಗಿರುತ್ತಾರೆ. ಹಾಗೂ ಸದರಿ ಜಮೀನು ಪ್ರತಿವಾದಿಗೆ ತಿಳಿಸಿದಂತೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದಾಗಿ ಕೋರಿರುತ್ತಾರೆ.

ದಿನಾಂಕ 28-06-2016 ರ ವಿಚಾರಣೆಯಲ್ಲಿ ಅರ್ಜಿದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಈ ಹಿಂದೆ ಇದ್ದಂತೆ ಕಕ್ಕುಪ್ಪಿ ಭರಮಪ್ಪ ತಂದೆ ಲೇಟ್ ಸಿದ್ದಪ್ಪ ಇವರ ಹೆಸರಿನಲ್ಲಿ ಹಾಗೇ ಉಳಿಸಿ ಯಥಾಸ್ಥಿತಿಯಂತೆ ಮುಂದುವರೆಸಲು ಅರ್ಜಿದಾರರು ಹೇಳಿಕೆ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಕ್ಕುಪ್ಪಿ ಗ್ರಾಮದ ಸನಂ 57ಜಿ/1. ವಿಸ್ತೀರ್ಣ 1-82 ಎಕ್ರೆ ಜಮೀನು ಅರ್ಜಿದಾರರು ಯಥಾಸ್ಥಿತಿಯಂತೆ ಮುಂದುವರೆಸಲು ಹೇಳಿಕೆ ನೀಡಿರುವ ಕಾರಣ ಈ ಪ್ರಕರಣವನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ
ಕೂಡ್ಲಿಗಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಗೌರಮ್ಮ ಗಂಡ ಲೇಟ್ ಸಿದ್ದಪ್ಪ ಕಕ್ಕುಪ್ಪಿ ಭರಮಪ್ಪ ತಂದೆ ಲೇಟ್ ಸಿದ್ದಪ್ಪ. ವಿರುಪಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ತಿಮ್ಮವ್ವ ಗಂಡ ಲೇಟ್ ಸಣ್ಣಯ್ಯ ವಿರುಪಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎಂ.ನಾಗರಾಜ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

**ದೃಢೀಕೃತ ನಕಲು**

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.